

ಮಾರ್ಚ್ 14 ಐನ್‌ಸ್ಟೈನ್ ಹುಟ್ಟಿದ ದಿನ

## ‘ಪೈ’ ಯಾರ ಕೊಡುಗೆ?

ಈಜಿಪ್ಟ್ ಹಾಗೂ ಬ್ಯಾಬಿಲೋನಿಯಾ ನಾಗರಿಕತೆಗಳ ಕಾಲದಿಂದಲೂ ‘ಪೈ’ನ ಬೆಲೆ ನಿಗದಿಯ ಪ್ರಯತ್ನಗಳು ನಡೆದಿವೆ. ಕ್ರಿಸ್ತಪೂರ್ವದ 3ನೇ ಶತಮಾನದ ಆರ್ಕಿಮಿಡೀಸ್ ಮೊದಲ ಬಾರಿಗೆ ಇದರ ಬೆಲೆಯನ್ನು ಎರಡು ದಶಮಾಂಶಗಳಿಗೆ ನಿರೂಪಿಸಿ 3.14 ಎಂದು ತಿಳಿಸಿದ. ನಂತರ ಚೈನಾದ ಗಣಿತಜ್ಞ ಜು ಚೋಂಗ್ಜಿ ಆರು ದಶಮಾಂಶಗಳವರೆಗೆ ಅದನ್ನು ವಿಸ್ತರಿಸಿ 3.141596 ಎಂದು ನಿರೂಪಿಸಿದ. ನಂತರದ ದಿನಗಳಲ್ಲಿ ದಶಮಾಂಶಗಳ ಸಂಖ್ಯೆಯು ಬೆಳೆಯುತ್ತಾ ಹೋಯಿತು.

ಪ್ರತೀ ಬಾರಿಯೂ ಅಷ್ಟು ಉದ್ದದ ಸಂಖ್ಯೆಯನ್ನು ಬರೆಯುವುದು ದುಸ್ತರವಾದಾಗ ಅದಕ್ಕೊಂದು ಸಂಕೇತ ನೀಡಿ ಸರಳಗೊಳಿಸಿದವನು ವೇಲ್ಸ್‌ನ ದ್ವೀಪವಾಸಿ ರೈತನ ಮಗನಾದ ವಿಲಿಯಂ ಜೋನ್ಸ್. 1706ರಲ್ಲಿ ಮೊದಲ ಬಾರಿಗೆ ‘ಪೈ’ಗೆ ಗ್ರೀಕ್ ಅಕ್ಷರವಾದ Π ಅನ್ನು ಬಳಸಿ ಪುಸ್ತಕವೊಂದನ್ನು ಪ್ರಕಟಿಸಿದ. ಸಂಖ್ಯೆಯು ವೃತ್ತದ ಪರಿಧಿಗೆ ಸಂಬಂಧಿಸಿದ್ದಲ್ಲದೆ ಪರಿಧಿಯನ್ನು ಪೆರಿಮೀಟರ್ ಎಂದು ಕರೆಯುತ್ತಿದ್ದುದರಿಂದ ಅದನ್ನು ಸಾಂಕೇತಿಕವಾಗಿ  ಎಂದೂ, ಅಕ್ಷರಗಳಲ್ಲಿ Π ಎಂದೂ ಬರೆದ. ಅಂದಿನ ವಿದ್ವಾಂಸರ ಲೋಕ ಇವನ ಕೊಡುಗೆಯನ್ನು ಅಷ್ಟಾಗಿ ಸ್ವಾಗತಿಸಲಿಲ್ಲ. ಸಾಮಾನ್ಯ ಹಳ್ಳಿಯಿಂದ ಬಂದ ಇವನೇನು ಗಣಿತದ ಸ್ಥಿರಾಂತಕ್ಕೆ ಚಿನ್ಹೆ ನೀಡುವುದು ಎಂದು ಸಣ್ಣ ಮಾತನಾಡಿದ ಇಂಗ್ಲೆಂಡಿನ ಗಣಿತ ಭೌತಜ್ಞ ಸರ್ ಐಸ್ಯಾಕ್ ನ್ಯೂಟನ್ ಮತ್ತವನ ಗೆಳೆಯ ಎಡ್ಮಂಡ್ ಹ್ಯಾಲಿ ವಿಲಿಯಂನ ಸ್ನೇಹವನ್ನೇ ತೊರೆದರು. ಆದರೆ ವಿಲಿಯಂನ ಮಹತ್ತರ ಕೊಡುಗೆಯನ್ನು ಗಮನಿಸಿದ ಲಂಡನ್ನಿನ ರಾಯಲ್ ಸೊಸೈಟಿ ಆತನಿಗೆ 1711ರಲ್ಲಿ ತನ್ನ ಸದಸ್ಯತ್ವ ನೀಡಿ ಗೌರವಿಸಿತು. 18ನೇ ಶತಮಾನದ ಶ್ರೇಷ್ಠ ಗಣಿತಜ್ಞ ಲಿಯೋನಾರ್ಡ್ ಯೂಲರ್ 1737ರಲ್ಲಿ ಮೊದಲ ಬಾರಿಗೆ ಹಾಗೂ ತನ್ನೆಲ್ಲ ಲೆಕ್ಕಾಚಾರ ಹಾಗೂ ಪ್ರಮೇಯಗಳಲ್ಲಿ ಇದನ್ನು ಹೆಚ್ಚು ಹೆಚ್ಚು ಬಳಸಿ ಅದಕ್ಕೊಂದು ನೆಲೆಯೊದಗಿಸಿದ. ಯೂಲರ್‌ನನ್ನು ಅಪಾರವಾಗಿ ಗೌರವಿಸುತ್ತಿದ್ದ ಅಕ್ಷರಲೋಕ ವಿಲಿಯಂ ಜೋನ್ಸ್‌ನ ಸಂಕೇತಕ್ಕೂ ಅದೇ ಮನ್ನಣೆ ನೀಡಲು ಪ್ರಾರಂಭಿಸಿತು. 1934ರಲ್ಲಿ ವಿಶ್ವದ ಎಲ್ಲ ಕಡೆ ಪೈನ ಚಿನ್ಹೆಯ ಬಳಕೆ ಅಧಿಕೃತವಾಗಿ ಜಾರಿಗೆ ಬಂತು.

## ಪೈ ದಿನಾಚರಣೆಯ ವಿಶೇಷಗಳು

1. ಮೊದಲ ದಿನಾಚರಣೆ ನಡೆದದ್ದು 1988ರಲ್ಲಿ ಭೌತಶಾಸ್ತ್ರಜ್ಞ ಲ್ಯಾರಿ ಶಾ ಪೈನ ಮಹತ್ವವನ್ನು ನೆನಪಿಸಿಕೊಳ್ಳಲು ದೊಡ್ಡ ಮಟ್ಟದ ಕಾರ್ಯಕ್ರಮವೊಂದನ್ನು ಸ್ಯಾನ್‌ಫ್ರಾನ್ಸಿಸ್ಕೊ ನಗರದ ಎಕ್ಸ್‌ಪ್ಲಾರಾಟೋರಿಯಂನ ಮ್ಯೂಸಿಯಂನಲ್ಲಿ ಆಯೋಜಿಸಿದ. ವಿಶ್ವದೆಲ್ಲೆಡೆಯ ಗಣಿತಾಸಕ್ತರು ಇದನ್ನು ಮೆಚ್ಚಿಗೆಯಿಂದ ಗಮನಿಸಿ ತಮ್ಮ ದೇಶಗಳಲ್ಲೂ ‘ಪೈ ದಿನಾಚರಣೆ’ ಮಾಡತೊಡಗಿದರು. ದಿನಾಚರಣೆ ಎಷ್ಟು ಪ್ರಸಿದ್ಧವಾಯಿತೆಂದರೆ ಅಮೆರಿಕದ ಸನ್ನದು 2009ರಂದು ಮಾರ್ಚ್ 15ನ್ನು ‘ಪೈ ಡೇ’ ಎಂದು ಅಧಿಕೃತವಾಗಿ ಘೋಷಿಸಿದ್ದಲ್ಲದೆ, ಶಾಲಾ ಕಾಲೇಜುಗಳಿಗೆ ರಜೆಯನ್ನೂ ನೀಡಿತು. ಪೈ ಡೇ ಪ್ರಾರಂಭಿಸಿದ ಲ್ಯಾರಿ ಶಾ 2017ರ ಆಗಸ್ಟ್ 19ರಂದು ತೀರಿಕೊಂಡ.

2. ಅಮೆರಿಕದ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯವರು ಪದವಿ ಅಧ್ಯಯನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಅರ್ಜಿಗಳು ಸ್ವೀಕೃತವಾಗಿವೆಯೋ ಅಥವಾ ನಿರಾಕರಣೆಗೊಳಗಾಗಿವೆಯೋ ಎಂಬುದನ್ನು ಮಾರ್ಚ್ 14ರಂದೇ ಇ ಮೇಲ್ ಮೂಲಕ ಸಂಜೆ 6.28ಕ್ಕೆ ಅಭ್ಯರ್ಥಿಗಳಿಗೆ ತಿಳಿಸುವ ಪರಿಪಾಠ ಜಾರಿಯಲ್ಲಿದೆ. 6.28 ಎಂಬುದು ಪೈನ ಎರಡರಷ್ಟು. ಇದನ್ನು ಟಾ (Tau) ಟೈಮ್ ಎಂದು ಕರೆಯುತ್ತಾರೆ.



ಮಾರ್ಚ್ 14 ಸ್ಟೀಫನ್ ಹಾಕಿಂಗ್ ಮರಣ ಹೊಂದಿದ ದಿನ

3. ಪೈ (Π) ಎಂಬುದು ಮಕ್ಕಳು ಹಾಗೂ ದೊಡ್ಡವರಾದಿಯಾಗಿಯೂ ಇಷ್ಟಪಡುವ ಸಿಹಿ ತಿನಿಸು. ವೃತ್ತಾಕಾರದಲ್ಲಿರುವ ಮತ್ತು ಸಿಹಿಯಾಗಿರುವ ಪೈಯನ್ನು ತಿನ್ನುವ ಸ್ಪರ್ಧೆಗಳನ್ನೂ ಮಕ್ಕಳಿಗಾಗಿ ಏರ್ಪಡಿಸಲಾಗುತ್ತದೆ.

4. 2015ರ ಮಾರ್ಚ್ 14ನ್ನು ‘ಸೂಪರ್ ಪೈ ಡೇ’ ಎಂದು ಆಚರಿಸಲಾಗಿತ್ತು. ಏಕೆಂದರೆ ಅಂದಿನ ದಿನ ಸಾಯಂಕಾಲ ಮತ್ತು ಬೆಳಗ್ಗೆ 9 ಗಂಟೆ 26 ನಿಮಿಷ ಹಾಗೂ 53 ಸೆಕೆಂಡುಗಳಿಗೆ ಸರಿಯಾಗಿ ಪೈನ ಬೆಲೆಯನ್ನು ಹೊಂದಿಸಿದಾಗ ಅದರ ಮೊದಲ ಹತ್ತೂ ಅಂಕಿಗಳು ಅಂದಿನ ದಿನ, ವರ್ಷ ಹಾಗೂ ಸಮಯವನ್ನು ಕರಾರುವಕ್ಕಾಗಿ ಹೊಂದುತ್ತಿದ್ದವು. (Π=3.141592653)

5. ಹಲವು ಶಾಲೆಗಳಲ್ಲಿ ಪೈನ ಬೆಲೆಯನ್ನು ಹೆಚ್ಚು ದಶಮಾಂಶಗಳವರೆಗೆ ಕಂಠಗತ ಮಾಡಿಕೊಂಡು ಹೇಳುವ ಇಲ್ಲವೆ ಬರೆಯುವ ಸ್ಪರ್ಧೆಗಳನ್ನು ನಡೆಸಲಾಗುತ್ತದೆ.

